## ಅನುಬಂಧ-ಅ

**ಸಮಾಜ ಕಲ್ಯಾಣ ಇಲಾಖಾ ವ್ಯಾಪ್ತಿಯ ಅಡಿಯಲ್ಲಿ ಬರುವ ಡಾ|| ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಮತ್ತು ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಯೋಜನೆಗಳ ಫಲಾನುಭವಿಗಳ ಆಯ್ಕೆ ಹಾಗೂ ಸಾಲ ಮರುಪಾವತಿ ಬಗ್ಗೆ ಆಯ್ಕೆ ಸಮಿತಿಯು ಅನುಸರಿಸಬೇಕಾದ ಮಾರ್ಗಸೂಚಿಗಳು.**

--0--

ಸಮಾಜ ಕಲ್ಯಾಣ ಇಲಾಖಾ ವ್ಯಾಪ್ತಿಯ ಅಡಿಯಲ್ಲಿ ಬರುವ ಡಾ|| ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಮತ್ತು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಯೋಜನೆಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಸರ್ಕಾರಿ ಆದೇಶದ ಸಂಖ್ಯೆ:ಸಕಇ/221/ಬಿಸಿಎ/2008, ದಿನಾಂಕ:02/1/2009 ಮತ್ತು ಸರ್ಕಾರದ ತಿದ್ದುಪಡಿ ಆದೇಶದ ಸಂಖ್ಯೆ:ಸಕಇ/253/ಬಿಸಿಎ/2009 ದಿನಾಂಕ:09/11/2009ರ ಅನ್ವಯ ಆಯಾ ವಿಧಾನಸಭಾ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯನ್ನು ರಚಿಸಲಾಗಿರುತ್ತದೆ. ಆದರೆ ಈ ಆಯ್ಕೆ ಸಮಿತಿಗಳು ಫಲಾನುಭವಿಗಳನ್ನು ಆಯ್ಕೆ ಮಾಡುವಲ್ಲಿ ವಿಳಂಭವಾಗುತ್ತಿರುವುದನ್ನು ಗಮನಿಸಲಾಗಿದೆ. ಅಲ್ಲದೇ ವಿವರವಾದ ಮಾರ್ಗದರ್ಶನಗಳು ಸಹ ಇರುವುದಿಲ್ಲವೆಂದು ಗಮನಿಸಲಾಗಿದೆ. ಆದುದರಿಂದ ಫಲಾನುಭವಿಗಳ ಆಯ್ಕೆಯಲ್ಲಿ ಪಾರದರ್ಶಕತೆ ಮತ್ತು ಅರ್ಹ ಫಲಾನುಭವಿಗಳನ್ನು ಹಾಗೂ ಕಾಲಮಿತಿಯೊಳಗೆ ಆಯ್ಕೆ ಮಾಡಲು ಅನುಕೂಲವಾಗುವಂತೆ ಈ ಕೆಳಕಂಡ ಮಾರ್ಗಸೂಚಿಗಳನ್ನು ರೂಪಿಸಲಾಗಿದೆ. ಸದರಿ ಆಯ್ಕೆ ಸಮಿತಿಗಳು ಈ ಮಾರ್ಗಸೂಚಿಗಳನ್ನು ಅನುಸರಿಸಿ ಫಲಾನುಬವಿಗಳನ್ನು ಆಯ್ಕೆ ಮಾಡಲು ಕೋರಲಾಗಿದೆ.

### ಆಯ್ಕೆಯ ವಿಧಾನ ಮತ್ತು ಮಾರ್ಗಸೂಚಿಗಳು:

1) ಆಯಾ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರು ಆರ್ಥಿಕ ವರ್ಷಕ್ಕೆ ಲಭ್ಯವಾಗುವ ಆಯವ್ಯಯವನ್ನು ಅವಲಂಭಿಸಿ ವಿಧಾನಸಭಾ ಕ್ಷೇತ್ರವಾರು ಬೌತಿಕ ಮತ್ತು ಆರ್ಥಿಕ ಗುರಿಯನ್ನು ನಿಗಧಿಪಡಿಸಿ ಏಪ್ರಿಲ್ ತಿಂಗಳಲ್ಲಿಯೇ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ತಿಳಿಸತಕ್ಕದ್ದು.

2) ಎಲ್ಲಾ ಯೋಜನೆಗಳಿಗೆ ಸಂಬಂಧಿಸಿದಂತೆ,(ಗಂಗಾಕಲ್ಯಾಣ ಯೋಜನೆಯನ್ನೂ ಸೇರಿಸಿ) ಆಯಾ ನಿಗಮಗಳ ಜಿಲ್ಲಾ ವ್ಯವಸ್ಥಾಪಕರುಗಳು ವರ್ಷದ ಏಪ್ರಿಲ್ ತಿಂಗಳಲ್ಲಿ ಪತ್ರಿಕಾ ಪ್ರಕಟಣೆಗಳ ಮುಖಾಂತರ ಮತ್ತು ಕರಪತ್ರಗಳ ಮುಖಾಂತರ ವಿವಿಧ ಚಟುವಟಿಕೆಗಳಿಗೆ ಅರ್ಜಿಗಳನ್ನು ಆಹ್ವಾನಿಸುವುದು.

3) ವಿವಿಧ ಯೋಜನೆಗಳಿಗೆ ಅರ್ಜಿಗಳನ್ನು ಮುದ್ರಿಸಿ ಫಲಾನುಭವಿಗಳಿಗೆ ಲಭ್ಯವಾಗುವಂತೆ ವ್ಯವಸ್ಥೆ ಮಾಡತಕ್ಕದ್ದು.

4) ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕವನ್ನು ಜೂನ್ 15ನೇ ತಾರೀಖು ಎಂದು ನಿರ್ಧರಿಸತಕ್ಕದ್ದು. ಕೊನೆಯ ತಾರೀಖಿನ ನಂತರ ಬಂದ ಅರ್ಜಿಗಳನ್ನು ಪರಿಗಣಿಸತಕ್ಕದ್ದಲ್ಲ. ಈ ತರಹ ಮಾಡಿದ್ದಲ್ಲಿ ಒಟ್ಟು ಬೇಡಿಕೆ ಲಭ್ಯವಿದ್ದು ಅರ್ಹ ಫಲಾನುಭವಿಗಳಿಗೆ ಲಭ್ಯವಿರುವ ಅನುದಾನದಿಂದ ಒಂದು ನಿರ್ದಿಷ್ಟ ಅವಧಿಯೊಳಗೆ ಸಾಲ ಸೌಲಭ್ಯ ಒದಗಿಸಲು ಸಾಧ್ಯವಾಗುತ್ತದೆ.

5) ಆಯಾ ದಿನ ಬಂದ ಅರ್ಜಿಗಳನ್ನು ಆಯಾ ದಿನವೇ ಜಿಲ್ಲಾ ವ್ಯವಸ್ಥಾಪಕರುಗಳು ಕ್ರಮ ಸಂಖ್ಯೆ ನೀಡಿ ತಾಲ್ಲೂಕುವಾರು ಕಂಪ್ಯೂಟರ್‌ನಲ್ಲಿ ಅರ್ಜಿದಾರರ ಹೆಸರುಗಳನ್ನು ನಮೂದಿಸುವುದು.

6) ಬಂದಿರುವ ಅರ್ಜಿಗಳನ್ನು ಆಯಾ ಯೋಜನೆಗಳಿಗೆ ನಿಗಧಿಪಡಿಸಿದ ಅರ್ಹತೆಗಳು ಹೊಂದಿದ್ದಾರೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಪರಿಶೀಲಿಸಿ ಅರ್ಹತೆ ಹೊಂದಿರುವವರ ಪಟ್ಟಿಯನ್ನು ತಯಾರಿಸಿ ಕಂಪ್ಯೂಟರೀಕರಣ ಮಾಡುವುದು. ಅನರ್ಹರಾಗಿರುವ ಅರ್ಜಿಗಳನ್ನು ಸಹ ಪಟ್ಟಿ ಮಾಡುವುದು.

7) ಅರ್ಹ ಅರ್ಜಿದಾರರ ಪಟ್ಟಿ ಮತ್ತು ಅನರ್ಹರ ಅರ್ಜಿದಾರರ ಪಟ್ಟಿ ಮೂಲ ಅರ್ಜಿಗಳನ್ನು ವಿಧಾನಸಭಾ ಕ್ಷೇತ್ರವಾರು ವಿಂಗಡಿಸಿ ಸಂಬಂಧಿಸಿದ ತಾಲ್ಲೂಕ ಅಧಿಕಾರಿಗಳಿಗೆ ಕಳುಹಿಸತಕ್ಕದ್ದು.

8) ಜಿಲ್ಲಾ ವ್ಯವಸ್ಥಾಪಕರು ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಸದರಿ ಸಮಿತಿಯ ಅಧ್ಯಕ್ಷರಿಗೆ ಪತ್ರ ಬರೆದು, ತಾಲ್ಲೂಕು ಆಯ್ಕೆ ಸಮಿತಿಯನ್ನು ಜುಲೈ ಮೊದಲನೇ ವಾರದಲ್ಲಿ ಸಭೆ ನಡೆಸಲು ಕೋರುವುದು. ಆಯ್ಕೆ ಸಮಿತಿ ಸಭೆಯನ್ನು ಸರ್ಕಾರದ ಕಛೇರಿ / ಸ್ಥಳಗಳಲ್ಲಿ ಮಾತ್ರ ನಡೆಸತಕ್ಕದ್ದು.

9) ಅರ್ಹ ಪಟ್ಟಿಯನ್ನು ಮತ್ತು ಅನರ್ಹ ಪಟ್ಟಿಯನ್ನು ಆಯ್ಕೆ ಸಮಿತಿಗೆ ಸಲ್ಲಿಸಿ, ಸಮಿತಿಯ ಅನುಮೋದನೆ ಪಡೆಯತಕ್ಕದ್ದು. ಅನರ್ಹ ಅರ್ಜಿದಾರರಿಗೆ ಸೂಕ್ತ ಹಿಂಬರಹ ನೀಡತಕ್ಕದ್ದು. ಅನುಮೋದಿಸಿದ ಅರ್ಹ ಪಟ್ಟಿಯಲ್ಲಿರುವ ಅರ್ಜಿದಾರರನ್ನು ಮಾತ್ರ ನಿಗಮಗಳಿಗೆ ನೀಡಿದ ಭೌತಿಕ ಗುರಿಯಾನುಸಾರ ಫಲಾನುಭವಿಗಳನ್ನು ಪ್ರತಿ ವರ್ಷ ಆಯ್ಕೆ ಮಾಡತಕ್ಕದ್ದು. ಇದರಿಂದ ಅರ್ಹ ಪಟ್ಟಿಯಲ್ಲಿರುವ ಅರ್ಜಿದಾರರು ಪ್ರತಿ ವರ್ಷ ಹೊಸದಾಗಿ ಅರ್ಜಿಗಳನ್ನು ಸಲ್ಲಿಸಬೇಕಾಗಿರುವುದಿಲ್ಲ. ಎಲ್ಲಾ ಕ್ಷೇತ್ರಗಳಲ್ಲಿ ಆಯ್ಕೆ ಪಟ್ಟಿಯನ್ನು ಜುಲೈ 31ನೇ ತಾರೀಖಿನೊಳಗೆ ಪೂರ್ಣಗೊಳಿಸುವುದು. ಆದರೆ, ಅರ್ಹ ಪಟ್ಟಿಯಲ್ಲಿ ಇರದೇ ಇರುವ ಜನರು ಹೊಸದಾಗಿ ಪ್ರತಿ ವರ್ಷ ಏಪ್ರಿಲ್ ತಿಂಗಳಲ್ಲಿ ಸಲ್ಲಿಸುವ ಅರ್ಜಿಗಳನ್ನು ಅರ್ಹ ಫಲಾನುಭವಿಗಳ ಪಟ್ಟಿಯ ಕೊನೆಯ ಕ್ರಮ ಸಂಖ್ಯೆಯಿಂದ ಸೇರಿಸುವುದು.

10) ಜುಲೈ 31ನೇ ತಾರೀಖಿನೊಳಗೆ ಸದರಿ ಸಮಿತಿಗಳು ಆಯ್ಕೆ ಮಾಡದೇ ಇದ್ದಲ್ಲಿ, ಅದನ್ನು ಸರ್ಕಾರಕ್ಕೆ ತಿಳಿಸತಕ್ಕದ್ದು ಮತ್ತು ಮುಂದಿನ ಕ್ರಮದ ಬಗ್ಗೆ ಸರ್ಕಾರದ ಮಟ್ಟದಲ್ಲಿ ಕ್ರಮ ಜರುಗಿಸಲಾಗುವುದು.

11) ಬ್ಯಾಂಕಿನ ಮುಖಾಂತರ ಸಾಲ ನೀಡುವ ಯೋಜನೆಗಳಲ್ಲಿ ಆಯ್ಕೆಯಾದ ಫಲಾನುಭವಿಗಳ ಅರ್ಜಿಗಳನ್ನು ವಾಣಿಜ್ಯ ಬ್ಯಾಂಕ್‌ಗಳಿಗೆ ಮತ್ತು ಆರ್.ಆರ್.ಬಿ.ಗಳಿಗೆ ಮತ್ತು ಸಹಕಾರ ಬ್ಯಾಂಕ್‌ಗಳಿಗೆ ಸಾಲ ಮಂಜೂರಾತಿಗಾಗಿ ತಕ್ಷಣವೇ ಕಳುಹಿಸುವುದು. ಸಂಬಂಧಿಸಿದ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಡಿ.ಎಲ್.ಬಿ.ಸಿ./ಬಿ.ಎಲ್.ಬಿ.ಸಿ. ಬ್ಯಾಂಕ್‌ಗಳ ಸಭೆಗಳಲ್ಲಿ ತಪ್ಪದೇ ಭಾಗವಹಿಸಿ ಮಂಜೂರಾಗದೇ ಇರುವ ಅರ್ಜಿಗಳ ಬಗ್ಗೆ ಮಂಜೂರಾತಿ ಪಡೆಯಲು ಪ್ರಯತ್ನಿಸತಕ್ಕದ್ದು.

12) ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಮತ್ತು ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಸೌಲಭ್ಯ ಕೋರಿ ಬರುವ ಅರ್ಜಿದಾರರನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಎಲ್ಲಾ ಉಪಜಾತಿಗಳಿಗೂ ಪ್ರಾತಿನಿಧ್ಯ ನೀಡುವುದು. ವಿಶೇಷವಾಗಿ ಪರಿಶಿಷ್ಟ ಜಾತಿ / ಪಂಗಡಗಳಲ್ಲಿ ಅಲ್ಪ ಸಂಖ್ಯೆಯಿದ್ದ ಮತ್ತು ಅತೀ ಹಿಂದುಳಿದ ಮತ್ತು ಅರಣ್ಯವಾಸಿ ಬುಡಕಟ್ಟು ಸಮುದಾಯಗಳನ್ನು ಆದ್ಯತೆ ಮೇರೆಗೆ ಅಂದರೆ ಒಟ್ಟು ಗುರಿಯಲ್ಲಿ ಕನಿಷ್ಠ 15% ರಿಂದ 20% ಗುರಿಯನ್ನು ನಿಗದಿಪಡಿಸಿ ಪರಿಗಣಿಸುವುದು.

13) ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಸರ್ಕಾರದ ಆದೇಶ ಸಂಖ್ಯೆ:ಸಕಇ/573/ಬಿಸಿಎ/1995, ದಿನಾಂಕ:23-02-1996ರಲ್ಲಿ ನಿಗದಿಪಡಿಸಿರುವ ಮೀಸಲಾತಿಯಂತೆ ಪ್ರವರ್ಗ 1 & 2ಎ ಗೆ ಶೇಕಡಾ 70ರಷ್ಟು ಪ್ರವರ್ಗ 3ಎ & 3ಬಿ ಗೆ ಶೇಕಡಾ 30ರಷ್ಟು ಆಯ್ಕೆ ಮಾಡತಕ್ಕದ್ದು. ಪ್ರವರ್ಗ 1 & 2ಎ ನಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಹಿಂದುಳಿದ ವರ್ಗಗಳಲ್ಲಿ ಅತ್ಯಂತ ಹಿಂದುಳಿದ ಅಲೆಮಾರಿ, ಅರೆ ಅಲೆಮಾರಿ ಜನಾಂಗಕ್ಕೆ ಹಾಗೂ ಇತರೆ ಸಾಮಾಜಿಕವಾಗಿ ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ಹಾಗೂ ಈವರೆವಿಗೂ ನಿಗಮದಿಂದ ಸೌಲಭ್ಯವನ್ನು ಪಡೆಯದೇ ಇರುವ ಜಾತಿಗಳಿಗೆ ಆದ್ಯತೆ ನೀಡುವುದು.

14) ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಶೇಕಡಾ 33ರಷ್ಟು ಮಹಿಳೆಯರಿಗೆ ಮತ್ತು ಶೇಕಡಾ 3ರಷ್ಟು ಅಂಗವಿಕಲರಿಗೆ ಆಯ್ಕೆ ಮಾಡುವುದು.

15) ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊಳವೆ ಬಾವಿಗಳನ್ನು ಅಂತರ್ ಜಲ ಲಭ್ಯವಿರುವ ಪ್ರದೇಶಗಳಿಗೆ ಮತ್ತು ಶಾಶ್ವತ ನೀರಾವರಿ ಇಲ್ಲದ ಪ್ರದೇಶಗಳಿಗೆ ಆದ್ಯತೆ ನೀಡುವುದು. ಅಂತರ್ ಜಲ ಕುಸಿದು ಬಹಳ ಆಳದ ಮಟ್ಟಕ್ಕೆಹೋಗಿದ್ದ ಪ್ರದೇಶಗಳಲ್ಲಿ (Red areas / Over Exploited) ಇತರೆ ಸ್ವಯಂ ಉದ್ಯೋಗ ಯೋಜನೆಗಳಲ್ಲಿ ಹೆಚ್ಚಿನ ಆದ್ಯತೆ ನೀಡಬಹುದು. (ಗಣಿ ಮತ್ತು ಭೂ

ವಿಜ್ಞಾನ ಇಲಾಖೆ ಹಾಗೂ ಕೇಂದ್ರೀಯ ಅಂತರ್ ಜಲ ಮಂಡಳಿಯ ವರದಿಯನ್ನು ನೋಡುವುದು)

16) ಆಯ್ಕೆ ಸಮಿತಿಯು ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಆಯಾ ಯೋಜನೆಗಳಲ್ಲಿ ಸರ್ಕಾರವು / ನಿಗಮಗಳು ಆಗಿಂದಾಗ್ಗೆ ಹೊರಡಿಸಿರುವ ಆದೇಶ ಮತ್ತು ಮಾರ್ಗಸೂಚಿಗಳ ಪ್ರಕಾರವೇ ಆಯ್ಕೆ ಮಾಡುವುದು. ಜಿಲ್ಲಾ ವ್ಯವಸ್ಥಾಪಕರುಗಳು/ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಈ ಆದೇಶ ಮತ್ತು ಮಾರ್ಗಸೂಚಿಗಳನ್ನು ಆಯ್ಕೆ ಸಭೆಯ ಗಮನಕ್ಕೆ ತಂದು ಓದಿ ನಡವಳಿಗಳಲ್ಲಿ ದಾಖಲಿಸುವುದು.

17) ಸಮಿತಿಯಿಂದ ಆಯ್ಕೆ ಮಾಡಿದ ಫಲಾನುಭವಿಗಳಿಗೆ ಸಾಲ ಸೌಲಭ್ಯವನ್ನು ಮಂಜೂರು ಮಾಡುವ ಮೊದಲು ಮಂಜೂರಾತಿ ಅಧಿಕಾರಿಗಳು ಆಯಾ ಯೋಜನೆಗಳಲ್ಲಿ ನಿಗದಿಪಡಿಸಿರುವ ದಾಖಲಾತಿಗಳನ್ನು ಒದಗಿಸದೆ ಇದ್ದಲ್ಲಿ ಅವುಗಳನ್ನು ಒಂದು ವಾರದೊಳಗಾಗಿ ಒದಗಿಸುವಂತೆ ಪತ್ರ ಕಳುಹಿಸಿ ಅಗತ್ಯ ದಾಖಲಾತಿಗಳನ್ನು ಪಡೆಯುವುದು. ಒಂದು ವೇಳೆ ದಾಖಲಾತಿಗಳನ್ನು ಒದಗಿಸದಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಬಾರದು. ಸಾಲ ಮಂಜೂರು ಮಾಡಿದ ನಂತರ ಅದನ್ನು **ಅಕೌಂಟ್ ಪೇಯಿ** ಚೆಕ್ ಮುಖಾಂತರ ಮಾತ್ರ ಬಿಡುಗಡೆ ಮಾಡುವುದು. ಯಾವ ಉದ್ದೇಶಕ್ಕೆ ಮಂಜೂರು ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಉಪಯೋಗಿಸಿಕೊಳ್ಳತಕ್ಕದ್ದು. ಸಹಾಯಧನವನ್ನು ಸಹ ಸೇರಿಸಿ ಚೆಕ್ ಮುಖಾಂತರ ನೀಡುವುದು.

18) ಸಾಲ ಸೌಲಭ್ಯ ಬ್ಯಾಂಕ್‌ಗಳಿಂದ ಮಂಜೂರು ಮಾಡಿದ್ದಲ್ಲಿ ಸಹಾಯಧನವನ್ನು ಬ್ಯಾಂಕ್ ಮುಖಾಂತರ ಸಾಲದ ಜೊತೆ ಫಲಾನುಭವಿಗಳಿಗೆ ಬಿಡುಗಡೆ ಮಾಡುವುದು. ಒಂದು ವೇಳೆ ಬ್ಯಾಂಕ್‌ಗಳು ಮಂಜೂರಾದ ಸಾಲದ ಮೊತ್ತವನ್ನು ಬಿಡುಗಡೆ ಮಾಡದೇ ಬರೀ ಸಹಾಯಧನದ ಮೊತ್ತವನ್ನು ಮಾತ್ರ ಬಿಡುಗಡೆ ಮಾಡಿದ್ದಲ್ಲಿ ಅಂತಹ ಪ್ರಕರಣಗಳನ್ನು ಪತ್ತೆ ಹಚ್ಚಿ ಸರ್ಕಾರಕ್ಕೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸುವುದು.

19) ಸಾಲ ಪಡೆದ ಫಲಾನುಭವಿಗಳು ಸಾಲವನ್ನು ಸದುಪಯೋಗ ಪಡಿಸಿಕೊಂಡಿರುವ ಬಗ್ಗೆ 3ನೇ ಪಾರ್ಟಿಯಿಂದ ತನಿಖೆ ಮಾಡಿಸಿ ವರದಿ ಪಡೆಯತಕ್ಕದ್ದು. ದುರುಪಯೋಗ ಮಾಡಿರುವ ಪ್ರಕರಣಗಳನ್ನು ಪತ್ತೆ ಮಾಡಿ ಕಾನೂನು ಪ್ರಕಾರ ಕ್ರಮ ಜರುಗಿಸುವುದು.

20) ಸಾಲ ಪಡೆದ ಫಲಾನುಭವಿಗಳು ಸಾಲವನ್ನು ಸದುಪಯೋಗಪಡಿಸಿಕೊಂಡಿರುವ ಬಗ್ಗೆ ಮತ್ತು ಹಾಗೂ ಸಾಲ ಮರುಪಾವತಿ ಬಗ್ಗೆ ಆಯ್ಕೆ ಸಮಿತಿಯು ವರ್ಷದಲ್ಲಿ ಕನಿಷ್ಠ 2 ಬಾರಿ ಸಭೆ ಸೇರಿ ಪರಿಶೀಲಿಸಿ ಸೂಕ್ತ ಕ್ರಮ ಜರುಗಿಸುವುದು.

21) ಫಲಾನುಭವಿಗಳಿಗೆ ಅರಿವು / ತರಬೇತಿ – ದಾಖಲಾತಿಗಳ ಬಗ್ಗೆ ಸಾಲದ ಚೆಕ್ಕುಗಳನ್ನು ವಿತರಿಸಲು, ಆಸ್ತಿಗಳನ್ನು ಸೃಜಿಸುವ ಬಗ್ಗೆ ಸಾಲ ಮರುಪಾವತಿ ಬಗ್ಗೆ ಜಿಲ್ಲಾ ವ್ಯವಸ್ಥಾಪಕರು ಫಲಾನುಭವಿಗಳಿಗೆ ಅನುಕೂಲವಾಗುವ ಆಯಾ ತಾಲ್ಲೂಕಿನ ಕೇಂದ್ರ ಸ್ಥಾನದಲ್ಲಿ ಶಿಬಿರಗಳನ್ನು ಏರ್ಪಡಿಸಿ ತರಬೇತಿ ನೀಡುವುದು.

22) ಸಾಲ ಮರುಪಾವತಿ ಮಾಡುವ ಬಗ್ಗೆ ಸೂಕ್ತ ಸಮಯದಲ್ಲಿ ನೋಟಿಸ್‌ಗಳನ್ನು ನೀಡಿ ಕಲೆಕ್ಷನ್ ಡ್ರೈವ್‌ಗಳನ್ನು ನಡೆಸಿ ಹೆಚ್ಚಿನ ಮೊತ್ತದಲ್ಲಿ ವಸೂಲು ಮಾಡಲು ಕ್ರಮ ತೆಗೆದುಕೊಳ್ಳುವುದು.

ಎಂ. ಎಂ. [illegible]

**ಸರ್ಕಾರದ ಅಧೀನ ಕಾರ್ಯದರ್ಶಿಗಳು**

**ಸಮಾಜ ಕಲ್ಯಾಣ ಇಲಾಖೆ**